ಎ.ಪಿ.ಎಲ್ ಮತ್ತು ಬಿ.ಪಿ.ಎಲ್ ಪಡಿತರ ಚೀಟಿಗಳ ವಿವರ

3875(4262); ಶ್ರೀ ಮೋಹಿಯದ್ದೀನ್ ಬಾವಾ ಬಿ.ಎ.

ಅ) ಮಂಗಳೂರು ಉತ್ತರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಎಪಿಎಲ್ ಮತ್ತು ಬಿಪಿಎಲ್ ಪಡಿತರ ಚೀಟಿಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

ಆ) ಇನ್ನೂ ಹಂಚಿಕೆಯಾಗದ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ಇ) ಯಾವಾಗ ಪಡಿತರ ಚೀಟಿಗಳನ್ನು ಹಂಚಿಕೆ ಮಾಡಲಾಗುವುದು?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

ಅ) ಮಂಗಳೂರು ಉತ್ತರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 17,871 ಎಪಿಎಲ್ ಮತ್ತು 9,437 ಬಿಪಿಎಲ್ ಪಡಿತರ ಚೀಟಿಗಳಿರುತ್ತವೆ.

ಆ) ಮಂಗಳೂರು ಉತ್ತರ ವಿಧಾನ ಸಭಾ ಕ್ಷೇತ್ರದಲ್ಲಿ ಎಪಿಎಲ್ ಚೀಟಿ ಕೋರಿ 3,183 ಅರ್ಜಿಗಳು ಸ್ವೀಕೃತವಾಗಿದ್ದು, ಇವುಗಳ ಪೈಕಿ 2,233 ಪಡಿತರ ಚೀಟಿಗಳನ್ನು ವಿತರಿಸಿದ್ದು, 950 ವಿತರಣೆಗಾಗಿ ಬಾಕಿ ಇರುತ್ತದೆ.

ಬಿಪಿಎಲ್ ಪಡಿತರ ಚೀಟಿ ಕೋರಿ 2,225 ಅರ್ಜಿಗಳು ಸ್ವೀಕೃತವಾಗಿದ್ದು, ಇವುಗಳ ಪೈಕಿ 1,365 ಪಡಿತರ ಚೀಟಿಗಳನ್ನು ವಿತರಿಸಿದ್ದು, 860 ವಿತರಣೆಗಾಗಿ ಬಾಕಿ ಇರುತ್ತದೆ.

ಇ) ಬಾಕಿ ಇರುವ ಪಡಿತರ ಚೀಟಿಗಳನ್ನು ಶೀಘ್ರದಲ್ಲೆ ವಿತರಿಸಲಾಗುವುದು.